ನನ್ನ ಓದು



ಮಲ್ಲಿಕಾರ್ಜುನ ಶೆಲ್ಲಿಕೇರಿ

# ಬುದ್ಧಯಾನ: ಹೊಸ ಭಾಷ್ಯದ ಬುದ್ಧನ ಸಂಕಥನ

ವೈಶಾಖ ಶುದ್ಧ ಪೌರ್ಣಿಮೆಯಂದು ಜನಿಸಿ, ಜ್ಞಾನೋದಯಗೊಂಡು ಮತ್ತು ವೈಶಾಖ ಶುದ್ಧ ಪೂರ್ಣಿಮೆಯಂದೇ ಮಹಾ ಪರಿನಿರ್ವಾಣಗೊಂಡ ಜಗತ್ತಿನ ಮಹಾಬೆಳಕು ಎಂದು ಹೆಸರಾದ ಬುದ್ಧನ ಕಥೆಯನ್ನು ಹೊಸ ಭಾಷ್ಯದಲ್ಲಿ ಕಂನಾಡಿಗಾ ನಾರಾಯಣ ಅವರು 'ಬುದ್ಧಯಾನ' ಕಾದಂಬರಿಯಲ್ಲಿ ಕಂಡರಿಸಿದ್ದಾರೆ.

ಅವರ ಹಿಂದಿನ ಮಹತ್ವದ ಕೃತಿಗಳಲ್ಲಿ ಒಂದಾದ 'ಕಾಂಡ'ದಲ್ಲಿ ತ್ರೇತಾಯುಗದ ರಾಮಾಯಣದ ರಾಮ, ಸೀತೆ ಪಾತ್ರಗಳನ್ನು ಸೇರಿದಂತೆ ದೈವತ್ವದಿಂದ ಸಾಮಾನ್ಯೀಕರಿಸಿದಂತೆ, ದ್ವಾಪರ ಯುಗದ ಮಹಾಭಾರತದ ಕೃಷ್ಣ, ಪಾಂಡವರ ಪಾತ್ರಗಳು 'ದ್ವಾಪರ'ದಲ್ಲಿದ್ದಂತೆ, 'ಬುದ್ಧಯಾನ'ದಲ್ಲಿಯೂ ನಾವೆಲ್ಲರೂ ದೈವತ್ವದ ರೂಪದಲ್ಲಿ ನೋಡುವ ಬುದ್ಧ ಅವರ ಚಿತ್ರಕಶಕ್ತಿಯಲ್ಲಿ ಮಾನವೀಯತೆಯ ಕರುಣಾ ಸಿಂಧುವಾಗಿ ಮೈದಳೆದಿದ್ದಾನೆ. ನಾರಾಯಣರವರು ಬುದ್ಧನ ವ್ಯಕ್ತಿತ್ವ, ಜೀವನದರ್ಶನವನ್ನು ಬೇರೆಬೇರೆ ಪಾತ್ರಗಳ ಮೂಲಕ ವಿಶಿಷ್ಟವಾಗಿ ಪರಿಭಾವಿಸಿ ಅನಾವರಣಗೊಳಿಸಿ ಕಥನಕ್ಕೆ ಹೊಸ ವ್ಯಾಖ್ಯಾನ ಪ್ರಾಪ್ತವಾಗುವಂತೆ ಮಾಡಿದ್ದಾರೆ.

ಮಾಯಾದೇವಿ, ಶುದ್ಧೋದನ, ಯಶೋಧರೆ, ಪ್ರಜಾಪ್ರತಿದೇವಿ, ದೇವದತ್ತ, ಕಿಸಾಗೋತಮಿ, ಪಥಾಚರಿ, ಅಂಗುಲಿಮಾಲಾ, ಆನಂದ ಇನ್ನೂ ಅನೇಕ ಪಾತ್ರಗಳು ತಮ್ಮನ್ನು ತಾವು ಪರಿಚಯಿಸಿಕೊಳ್ಳುತ್ತಾ ಸಿದ್ಧಾರ್ಥನ ವಿವಿಧ ಕಾಲಘಟ್ಟಗಳನ್ನು ದಾಟಿ ಬುದ್ಧನಾಗುವವರೆಗಿನ ಆತನ ಇತಿಹಾಸವನ್ನು ಹೇಳುತ್ತ ಸಾಗುವುದು ಈ ಕಾದಂಬರಿ. ಇದು 'ಬುದ್ಧಂ' ಮತ್ತು 'ಶರಣಂ' ಎಂಬ ಎರಡು ಭಾಗಗಳಲ್ಲಿ ಚೆಲ್ಲುವರಿದಿದ್ದು, ಬುದ್ಧನ ಚರಿತೆಯು ಆತನ ಜನ್ಮವೃತ್ತಾಂತದಿಂದ ಆರಂಭಗೊಂಡು ಮಹಾ ಪರಿನಿರ್ವಾಣದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಕಾದಂಬರಿಕಾರರು ಇಲ್ಲಿ ಆತನ ತತ್ವ, ಬೋಧನೆಗಳ ಒಳ- ಹೊರಗಣ ಮುಖಗಳಿಗಿಂತ ಆತನ ಬದುಕಲ್ಲಿ ಜರುಗುವ ವಿವಿಧ ಮಹತ್ತರ ಘಟನೆಗಳಿಗೆ ಒತ್ತು ಕೊಟ್ಟಿದ್ದಾರೆ. ಅಸಿತ ಮಹರ್ಷಿಗಳು ಸಿದ್ಧಾರ್ಥ ಜನಿಸಿದಾಗ 'ಇವನು ಮಹಾಜ್ಞಾನಿಯಾಗಿ ತನ್ನ ಅರಿವಿನ ಬೆಳಕಿನಿಂದ ಇಡೀ ಜಗತ್ತಿನ ಕತ್ತಲೆಯನ್ನು ತೊಳೆಯುತ್ತಾನೆ' ಎಂಬ ಮಾತನ್ನು ಕೇಳಿ ತಂದೆ ಶುದ್ಧೋದನ, 'ನನಗೆ ವಂಶೋದ್ಧಾರಕ ಮಗ ಹುಟ್ಟಿದನೆಂಬುವದಕ್ಕಿಂತ ಮಗ ಮಹಾಪುರುಷನಾಗುತ್ತಾನೆಂಬುವುದೇ ನನ್ನ ಮನಸ್ಸನ್ನು ತುಂಬಿ ಬರುವಂತೆ ಮಾಡಿತ್ತು' ಎಂಬ